ಶಾರದಮ್ಮ ಶಾಲೆಯ ಬಳಿಗೇ ಬಂದು ರಾಷ್ಟ್ರಪತಿಗಳ ಎದುರಿಗೆ ಗಲಾಟೆ ಮಾಡಿದರೆ ಎಂಬ ಪ್ರಶ್ನೆಯೂ ಎದುರಾಗಿತ್ತು. ಅವಳು ಶಾಲೆಯ ಬಳಿಗೆ ಬರದಂತೆ ಕಾವಲು ಕಾಯಲು ಒಂದಷ್ಟು ಯುವಕರಿಗೆ ಒಪ್ಪಿಸಲಾಗಿತ್ತು. ಅಲ್ಲಿಗೂ ಮೀರಿ ಒಂದು ವೇಳೆ ಅವಳು ಬಂದುಬಿಟ್ಟರೆ ಏನು ಮಾಡುವುದು ಎಂದು ಒಬ್ಬರು ಕೇಳಿದ್ದಕ್ಕೆ ಶ್ರೀರಾಮರೆಡ್ಡಿ 'ಹೇ ಆಯಪ್ಪನುಕೆ ಕನ್ನಡ ಬರೋಲ್ಲ... ಈಯಮ್ಮನುಕೆ ಆ ಭಾಷೆ ಬರೋಲ್ಲ... ಹೇಗೋ ಮ್ಯಾನೇಜ್ ಮಾಡಿದ್ರಾಯ್ತು' ಎಂದು ನುಡಿದಿದ್ದ. ಆಗ ಅಲ್ಲೇ ಇದ್ದ ಒಬ್ಬ ಯುವಕ, 'ಅಲ್ಲಣ್ಣ ಮೀಡಿಯಾ? ಸುಮ್ಕೆ ಇರ್ತಾರೆಯೆ' ಎಂದು ಕೇಳಿದ್ದ. ಹಾಗೇನಾದರೂ ಆದರೆ ಎಡವಟ್ಟಾಗುವುದರಲ್ಲಿ ಸಂಶಯವೇ ಇಲ್ಲ ಎಂದುಕೊಂಡ ಶ್ರೀರಾಮರೆಡ್ಡಿ, ಕೆಂಪಿರೆಡ್ಡಿ, ತಿಮ್ಮೇಗೌಡ ಮೊದಲಾದವರು ಯುವಕರಿಗೆ ಶಾರದಮ್ಮನ ಮನೆಯ ಸುತ್ತಲೂ ಕಾವಲು ಕಾಯುವಂತೆ ತಿಳಿಸಿದರು.

ಅಂದು ಬೆಳಗಿನ ಜಾವ ಶಾರದಮ್ಮ ಕಾರುಗಳ ಸದ್ದು ಮತ್ತು ಜೈಕಾರಗಳ ಸದ್ದಿಗೆ ಮೈ ಕೊಡವಿಕೊಂಡವಳಂತೆ ಎದ್ದು ಆಚೆ ಬಂದಳು. ಅವಳ ಮನೆಯ ಮುಂದೆ ರಸ್ತೆಯುದ್ದಕ್ಕೂ ಹತ್ತಡಿ ಉದ್ದದ ಗೋಡೆ ಅವಳಿಗೂ ರಸ್ತೆಗೂ ಅಡ್ಡಲಾಗಿ ನಿಂತಿತ್ತು. ತನ್ನ ಮನೆ, ರಸ್ತೆಯಲ್ಲಿ ಓಡಾಡುವವರಿಗೆ ಕಾಣಿಸದಿರಲಿ ಎಂದು ರಾತ್ರೋರಾತ್ರಿ ಅಷ್ಟು ದೊಡ್ಡ ಗೋಡೆಯನ್ನು ನಿರ್ಮಿಸಿ ಬಣ್ಣ ಬಳಿಯಲಾಗಿತ್ತು. ಒಂದೇ ರಾತ್ರಿಯಲ್ಲಿ ತನಗೆ ಗೊತ್ತಾಗದ ಹಾಗೆ ಇಷ್ಟು ದೊಡ್ಡ ಗೋಡೆಯನ್ನು ಅದು ಹೇಗೆ ನಿರ್ಮಿಸಿಬಿಟ್ಟರು ಎಂಬ ಪ್ರಶ್ನೆ ಅವಳನ್ನು ಕಾಡತೊಡಗಿತು. ಆದರೂ ಇದು ಊರ ಜನಗಳಿಗೆ ಸಾಧ್ಯವಾಗುವಂತಹ ಕೆಲಸವೆ ಎಂದು ಅವಳಿಗೆ ಅನಿಸತೊಡಗಿತು. ಕಾರುಗಳ ಸದ್ದು ಇನ್ನೂ ಹತ್ತಿರವಾಗತೊಡಗಿತು. ಮನೆಯ ಒಳಗೆ ಓಡಿದವಳೆ ಮೂಲೆಯಲ್ಲಿದ್ದ ಗಡಾರಿಯನ್ನು ತೆಗೆದುಕೊಂಡು ಆಚೆ ಬಂದು ಗೋಡೆಗೆ ಇರಿಯತೊಡಗಿದಳು. ಧಪ್... ಧಪ್... ಧಪ್... ಅವಳ ಎದೆಯ ಬಡಿತವನ್ನೇ ಹೋಲುವ ಗಡಾರಿಯ ಸದ್ದು. ಅವಳು ಹಾಗೆ ಗೋಡೆಗೆ ಬಡಿಯುತ್ತಿರುವ ಹೊತ್ತಿಗೆ ಮತ್ತೊಂದು ಬದಿಯಲ್ಲಿ ರಾಷ್ಟ್ರಪತಿಗಳನ್ನು ಹೊತ್ತ ಬುಲೆಟ್ ಪ್ರೂಫ್ ಕಾರು ರೊಯ್ಯನೆ ಹಾದುಹೋಯಿತು. ಅವಳು ಮತ್ತಷ್ಟು ಕ್ಷುದ್ರಗೊಂಡು ಕಾಲಿನಿಂದ ಜೋರಾಗಿ ಗೋಡೆಗೆ ಒದ್ದಳು. ಗೋಡೆ ಸದ್ದು ಮಾಡಿಕೊಂಡು ಉರುಳತೊಡಗಿತು...

ಜೋರಾದ ಗುಡುಗಿಗೆ ಬೆಚ್ಚಿದ ಶಾರದಮ್ಮ ಎದ್ದುಕುಳಿತಳು. ಮುಂಜಾನೆ ಐದು ಗಂಟೆ ಆಗಿರಬಹುದು. ಎರಡು ವಾರಗಳ ನಂತರ ಮತ್ತೆ ಜೋರುಮಳೆ ಜಡಿಯುತ್ತಲಿತ್ತು. ಎದ್ದು ಆಚೆ ಬಂದು ಬಾಗಿಲು ತೆಗೆದಳು. ರಸ್ತೆ ತುಂಬಿ ಹರಿಯುತ್ತಿತ್ತು. ಗೋಡೆ ಕಾಣದಿರುವುದು ಸಮಾಧಾನ ತಂದಿತು. ಊಫ್... ಎಂದುಕೊಳ್ಳುತ್ತಾ ಮತ್ತೆ ಒಳನಡೆದಳು. ಅದೇ ರೀತಿ ಸಂಜೆಯವರೆಗೂ ಮಳೆ ಬಿಡದೆ ಹೊಡೆದರೆ ಮತ್ತೆ ತನ್ನ ಮನೆ ಕೆರೆಯಾಗಲಿದೆ ಎಂದುಕೊಳ್ಳುತ್ತಾ ಒಂದು ಮೂಲೆಗೆ ಕುಳಿತಳು. ಮಳೆ ಸ್ವಲ್ಪ ಬಿಡುವುಕೊಟ್ಟರೆ ಹೋದ ವಾರವಷ್ಟೆ ಸಾಲ ಮಾಡಿ ತಂದಿದ್ದ ಪ್ಲಾಸ್ಟಿಕ್ ಕವರನ್ನು ಹಾಸಬೇಕು ಎಂದುಕೊಂಡಳು. ಅದರಂತೆಯೇ ಆರು ಗಂಟೆಯ ಸುಮಾರಿಗೆ ಮಳೆ ಸ್ವಲ್ಪ ಬಿಡುವುಕೊಟ್ಟಿತು. ರತ್ನಮ್ಮನ ಗಂಡನ ಸಹಾಯ ಪಡೆದು ಮನೆಯ ಮೇಲೆ ಕವರನ್ನು ಹಾಸಿ ಅದು ಹಾರಿಹೋಗದಂತೆ ಭದ್ರವಾಗಿ ಅದರ ಮೆಲೆ ಕಲ್ಲುಗಳನ್ನು ಇಟ್ಟು ಸಮಾಧಾನದ ನಿಟ್ಟುಸಿರುಬಿಟ್ಟಳು. ಮತ್ತೆ ಅವಳು ಒಳಗೆ ಬರುವಷ್ಟರಲ್ಲಿ ಮಳೆ ಅಬ್ಬರಿಸತೊಡಗಿತು. ಎಷ್ಟು ಹೊಯ್ಯುತ್ತೀಯೋ ಹೊಯ್ಯಿ... ಸೆರುವು ಮರುವೋಗೋಂಗೆ ಹೊಯ್ಯಿ ಎಂದು ಜೋರಾಗಿ ನಗತೊಡಗಿದಳು. ಅವಳ ಆ ನಗುವಿಗೆ ಎರಡು ಕಾರಣಗಳಿದ್ದವು. ಇನ್ನು ತನ್ನ ಮನೆ ತಕ್ಕಮಟ್ಟಿಗೆ ಸುರಕ್ಷಿತ ಎಂಬುದು ಒಂದಾದರೆ, ಮತ್ತೊಂದು ಕೆರೆ ಕೋಡಿ ಬಿದ್ದರೆ ರಾಷ್ಟ್ರಪತಿಗಳು ಶಾಲೆಯನ್ನು ತಲುಪಲು ಈಗ ನಿರ್ಧರಿಸಿರುವ ರಸ್ತೆಯ ಮೇಲೆಯೇ ನೀರು ಹರಿದು ಸಾಗುತ್ತದೆ... ಆಗ ಅವರು ತನ್ನ ಮನೆಯ ಮುಂದೆಯೇ ಹಾದು ಹೋಗಬೇಕಾಗುತ್ತದೆ ಎಂಬುದು. ಅವಳು ಬಹಳ ಹೊತ್ತು ನಗುತ್ತಲೇ ಇದ್ದಳು. ಇದರಿಂದ ಉತ್ತೇಜನಗೊಂಡಂತೆ ಆಚೆ ಮಳೆ ಹೊಯ್ಯುತ್ತಲೇ ಇತ್ತು.

ಸಂಜೆಯಾದರೂ ಮಳೆ ಬೀಳುತ್ತಲೆ ಇತ್ತು. ಯಾರೂ ಮನೆಗಳಿಂದ ಆಚೆ ಬರುವ ಹಾಗಿರಲಿಲ್ಲ. ಬಾಗಿಲಲ್ಲಿ ನಿಂತುಕೊಂಡು ಮಳೆಯನ್ನು ನೋಡುತ್ತಲಿದ್ದ